ಕೆಲಸವನ್ನು ಮಾಡತಕ್ಕಂಥದ್ದಕ್ಕೆ ಏನು ಕ್ಲಿಯರೆನ್ಸ್ ಆಗಬೇಕಾಗಿದೆ ಆ ದೃಷ್ಟಿಯಿಂದ ಸ್ವಲ್ಪ ತಡವಾಗಿರತಕ್ಕಂಥದ್ದು. ಅದರ ಜೊತೆಗೆ ಹೊಸದಾಗಿ ಇಂಧನ ಭದ್ರತಾ ಯೋಜನೆಯಲ್ಲಿ ಮಾಡತಕ್ಕಂಥದ್ದಕ್ಕೆ ಏನು ದೆಹಲಿಗೆ ಪ್ರಸ್ತಾವನೆಯನ್ನು ಕಳುಹಿಸಿದ್ದೇವೆ, ಅದಕ್ಕೆ ಆದಷ್ಟು ಬೇಗ ಅನುಮತಿಯನ್ನು ಪಡೆಯತಕ್ಕಂಥದ್ದಕ್ಕೆ ಗಮನಹರಿಸುತ್ತೇವೆ. ಈ ಕೆಲಸವನ್ನು ಪ್ರಾರಂಭ ಮಾಡುವುದಕ್ಕೆ ಈಗಾಗಲೇ 36 ಲಕ್ಷ ರೂಪಾಯಿಗಳ ಅಂದಾಜು ವೆಚ್ಚವನ್ನೂ ಈಗಾಗಲೇ ಮಾಡಿರತಕ್ಕಂಥೆ ಇದೆ, ಆದಷ್ಟು ಬೇಗ ಆ ಕೆಲಸವನ್ನು ಕಾರ್ಯಾರಂಭ ಮಾಡತಕ್ಕಂಥದ್ದಕ್ಕೆ ಸರ್ಕಾರ ಪರಿಶೀಲನೆ ಮಾಡುತ್ತದೆ.

ಶ್ರೀ ಹೆಚ್. ಹಾಲಪ್ಪ : ಈ ಹಳ್ಳಿಗಳು ಶರಾವತಿ ಈ ರಾಜ್ಯಕ್ಕೆ ವಿದ್ಯುತ್ ಕೊಡುವುದಕ್ಕೆ ಮುಳುಗಡೆಯಾದಂಥ ಹಳ್ಳಿಗಳು. ಏನು ಈ ಹಳ್ಳಿಗಳವರು ನಿರಾಶ್ರಿತರಾದಾಗ ಪುನರ್ವಸತಿ ಕಲ್ಪಿಸಬೇಕಾದರೆ ಕಾಡಿನಲ್ಲಿ ರಾಜ್ಯ ಸರ್ಕಾರದ ಅರಣ್ಯ ಪ್ರದೇಶದಲ್ಲಿ ಆವಾಗ ಪುನರ್ವಸತಿ ಕಲ್ಪಿಸಿಕೊಟ್ಟಿದ್ದರು. ಈಗ ಅದೇ ಕಾರಣಕ್ಕಾಗಿ ಅರಣ್ಯ ಇಲಾಖೆಯೊಳಗಿದ್ದಾವೆ. ಅರಣ್ಯ ಇಲಾಖೆ ಪ್ರಕಾರ ವಿದ್ಯುತ್ ಕೊಡುವುದಿಲ್ಲವೆಂದು ಹೇಳುತ್ತಾರೆ. ಮೂಲಭೂತ ಸೌಕರ್ಯಗಳು ಕೊಡುವುದಕ್ಕೆ ಅರಣ್ಯ ಇಲಾಖೆಯ ತಕರಾರೇನು? ಹಾಗಿದ್ದರೆ, ವಿದ್ಯುತ್ ಕೊಡುವುದಕ್ಕೇ ಬರುವುದಿಲ್ಲವೆ? ನನ್ನ ಕ್ಷೇತ್ರದಲ್ಲಿ 403 ಹಳ್ಳಿಗಳಿಗೆ ಈಗಲೂ ವಿದ್ಯುತ್ ಇಲ್ಲ. ದಯವಿಟ್ಟು, ತಾವು ಉತ್ತರ ಕೊಟ್ಟು ಬೇಗ ಕ್ರಮ ತೆಗೆದುಕೊಳ್ಳಬೇಕೆಂದು ನಾನು ಅಧ್ಯಕ್ಷರ ಮೂಲಕ ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಹೆಚ್. ಡಿ. ಕುಮಾರಸ್ವಾಮಿ : ಹೊಸ ನಗರ ತಾಲ್ಲೂಕಿನ 400 ಹಳ್ಳಿಗಳ ವಿಷಯದ ಬಗ್ಗೆ ಸನ್ಮಾನ್ಯ ಸದಸ್ಯರ ಈ ಒಂದು ಕಾಳಜಿ ಏನಿದೆ, ಈ ವಿಷಯದಲ್ಲಿ ಅರಣ್ಯ ಇಲಾಖೆಯ ಕೆಲವು ಕಾನೂನುಗಳ ತೊಡಕುಗಳೇನಿವೆ, ಆ ತೊಡಕುಗಳನ್ನು ಬಗೆಹರಿಸಕ್ಕಂಥದ್ದಕ್ಕೆ ಸರ್ಕಾರ ಪರಿಶೀಲನೆ ಮಾಡಿ ಆದಷ್ಟು ಬೇಗ ಈ ಹಳ್ಳಿಗಳಿಗೆ ಏನು ಆ ಭಾಗದಲ್ಲಿ ಇವತ್ತು ರಾಜ್ಯಕ್ಕೆ ವಿದ್ಯುಚ್ಛಕ್ತಿಯನ್ನು ಕೊಡತಕ್ಕಂಥದ್ದಕ್ಕೆ ಅಲ್ಲಿಯ ಜನರ ಒಂದು ಸಹಕಾರ ಏನಿದೆ, ಅದನ್ನು ಗಮನಿಸಿ, ಆ ಭಾಗದ ಜನರಿಗೂ ಆದಷ್ಟು ತ್ವರಿತವಾಗಿ ಈ ವಿದ್ಯುಚ್ಛಕ್ತಿಯ ಸಂಪರ್ಕವನ್ನು ಕಲ್ಪಿಸ ತಕ್ಕಂಥದ್ದಕ್ಕೆ ನಾವು ಕಾರ್ಯಕ್ರಮವನ್ನು ನಿರೂಪಿಸುತ್ತೇವೆ.

ಗೌರಿಬಿದನೂರು ತಾ: ನಲ್ಲಿ ಮರಳು ಗಣಿಗಾರಿಕೆಯಿಂದ ಕುಡಿಯುವ ನೀರಿಗೆ ಹಾಗೂ ಪರಿಸರಕ್ಕೆ ಆಗುತ್ತಿರುವ ತೊಂದರೆಯನ್ನು ತಪ್ಪಿಸುವುದರ ಬಗ್ಗೆ.

(15) 192. ಶ್ರೀ ಶಿವಶಂಕರ್ ರೆಡ್ಡಿ ಎನ್. ಹೆಚ್. (ಗೌರಿಬಿದನೂರು) ಮಾನ್ಯ ಮುಖ್ಯಮಂತ್ರಿಗಳು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಕೋಲಾರ ಜಿಲ್ಲೆಯ ಗೌರಿಬಿದನೂರು ತಾಲ್ಲೂಕಿನ ಮರಳು ಗಣಿಗಾರಿಕೆಯಿಂದ ಕುಡಿಯುವ ನೀರು ಹಾಗೂ ಪರಿಸರ ವಿನಾಶಕ್ಕೆ ಹೋಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಇದನ್ನು ತಡೆಗಟ್ಟಲು ಮಾನ್ಯ ಮುಖ್ಯ ಮಂತ್ರಿಗಳ ಹಾಗೂ ಉನ್ನತ ಅಧಿಕಾರಿಗಳ ಸಭೆಗಳನ್ನು ನಡೆಸಿದ್ದು ಸರ್ಕಾರದ ಗಮನದಲ್ಲಿಲ್ಲವೇ;

ಇ) ಹಾಗಿದ್ದಲ್ಲಿ ಇದನ್ನು ಶಾಶ್ವತವಾಗಿ ನಿಷೇದಿಸಲು ನದಿ ಪಾತ್ರ ಹಾಗೂ ಖಾಸಗೀ ಜಮೀನುಗಳಲ್ಲಿ ಮರಳು ಎತ್ತದಂತೆ ಮಾಡಲು ಸರ್ಕಾರ ಕೈಗೊಂಡಿರುವ ಕ್ರಮವೇನು ?

ಶ್ರೀ ಹೆಚ್. ಡಿ. ಕುಮಾರಸ್ವಾಮಿ (ಮುಖ್ಯ ಮಂತ್ರಿಗಳು)

ಅ) ಗಮನಕ್ಕೆ ಬಂದಿದೆ, ಕೋಲಾರ ಜಿಲ್ಲೆಯ ಗೌರಿಬಿದನೂರು ತಾಲ್ಲೂಕಿನಲ್ಲಿ ಅಂತರ್ಜಲ ಮಟ್ಟವು ಬಹಳ ಕೆಳಗೆ ಇರುವುದರಿಂದ, ಕುಡಿಯುವ ನೀರಿನ ಸಮಸ್ಯೆ ಸ್ವಲ್ಪ ಮಟ್ಟಿಗೆ ಮರುಕಳುಹಿಸುತ್ತಿರುತ್ತದೆ. ಸ್ಥಾನಿಕವಾದ ಮರಳು ಗಣಿಗಾರಿಕೆಯು ಆ ಪ್ರದೇಶದ ಅಂತರ್ಜಲ ಪುನರ್ಚೇತನದ ಮೇಲೆ ಸ್ವಲ್ಪ ಮಟ್ಟಿಗೆ ಪ್ರತಿಕೂಲ ಪರಿಣಾಮ ಬೀರುತ್ತದೆ. ಈ ಎಲ್ಲಾ ಅಂಶಗಳನ್ನು ಅನುರಕ್ಷಿಸಿ ಕೇಂದ್ರೀಯ ಅಂತರ್ಜಲ ಸಂಸ್ಥೆಯು ಅಧ್ಯಯನ ನಡೆಸಿ ಒಂದು ಮೀಟರ್ ಆಳದವರೆಗಿನ ಮರಳು ಗಣಿಗಾರಿಕೆಯಿಂದ ಅಂತರ್ಜಲದ ಪುನರ್ಚೇತನದ ಮೇಲೆ ಪ್ರತಿಕೂಲ ಪರಿಣಾಮ ಬೀರುವುದಿಲ್ಲವೆಂದು ಅಭಿಪ್ರಾಯಿಸಿರುತ್ತದೆ, ಅಂತೆಯೇ ಇಲಾಖೆಯು ಮರಳು ಗಣಿಗಾರಿಕೆಯನ್ನು ಒಂದು ಮೀಟರ್ ಆಳದವರೆಗೆ ಮಾತ್ರ ನಿರ್ಬಂದಿಸಿದೆ.

ಈ ಪ್ರದೇಶದಲ್ಲಿ ಅಂತರ್ಜಲ ಗುಣಮಟ್ಟವು ಯೋಗ್ಯವಾಗಿದೆಯೆಂದು ಅಧ್ಯಯನದಿಂದ ತಿಳಿದುಬಂದಿದೆ.

ಇ) ಈ ವಿಷಯದಲ್ಲಿ ಸರ್ಕಾರದಿಂದ ಜಿಲ್ಲಾ ಉಸ್ತುವಾರಿ ಸಮಿತಿಯನ್ನು ರಚಿಸಿ ದಿನಾಂಕ:06–08–2005ರಲ್ಲಿ ಹೊಸ ಮರಳು ನೀತಿಯನ್ನು ಜಾರಿ ಮಾಡಿದ್ದು, ಅದರನ್ವಯ ದಿನಾಂಕ:17–11–2005ರಂದು ಜಿಲ್ಲಾ ಉಸ್ತುವಾರಿ ಸಮಿತಿಯಲ್ಲಿ ಕೋಲಾರ ಜಿಲ್ಲೆಯಲ್ಲಿ ಮರಳು ಹರಾಜು ಪ್ರಕ್ರಿಯೆಯನ್ನು ಕೈಬಿಡಲು ಸರ್ವಾನುಮತದಿಂದ ತೀರ್ಮಾನಿಸಲಾಗಿದೆ. ಈ ತೀರ್ಮಾನದಿಂದಾಗಿ ಅಕ್ರಮ ಗಣಿಕಾರಿಕೆಯನ್ನು ನಿಲ್ಲಿಸಲು ಕ್ರಮ ಜರುಗಿಸಲಾಗಿದೆ. ಅಕ್ರಮ ಗಣಿಗಾರಿಕೆಯನ್ನು ತಡೆಗಟ್ಟಲು ಜಿಲ್ಲಾ ಮಟ್ಟದ ಟಾಸ್ಕ್ ಫೋರ್ಸ್ ಸಮಿತಿ ಸಹ ರಚಿಸಲಾಗಿದೆ. ಅಕ್ರಮ ಗಣಿಗಾರಿಕೆ ನಡೆಸುವವರ ಮೇಲೆ ಕ್ರಿಮಿನಲ್ ಮೊಕದ್ದಮೆಯನ್ನು ದಾಖಲಿಸುವುದಲ್ಲದೆ ಅದಕ್ಕೆ ಬಳಸಲಾದ

ವಾಹನ, ಯಂತ್ರೋಪಕರಣಗಳನ್ನು ಜಪ್ತಿ ಮಾಡಲು ಆದೇಶ ಮಾಡಿದ್ದು, ಅದರನ್ವಯ

1) 75 ಪಟ್ಟಾ ಜಮೀನು ಮಾಲೀಕರ ಮೇಲೆ F.I.R. ದಾಖಲು ಮಾಡಿದ್ದು ಮತ್ತು

2) ಅಕ್ರಮ ಸಾಗಾಣಿಕೆಯಲ್ಲಿ 21 ವಾಹನಗಳ ಮೇಲೆ ತೊಡಗಿದ್ದವರ ಮೇಲೆ F IR ದಾಖಲು ಮಾಡಿದ್ದು,

3) 294 ವಾಹನಗಳಿಗೆ ದಂಡ ವಿಧಿಸಲಾಗಿದ್ದು, ಅಕ್ರಮ ಸಾಗಾಣಿಕೆಯ ಮೇಲೆ 17.09 ಲಕ್ಷ ರೂ. ಗಳನ್ನು ದಂಡ ಸಂಗ್ರಹಿಸಿದ್ದು ಮತ್ತು

4) 680 ಮೆ. ಟನ್ ಮರಳನ್ನು ಜಪ್ತಿ ಮಾಡಿ ಸಂಗ್ರಹಿಸಲಾಗಿದೆ.

ಶ್ರೀ ಎನ್.ಹೆಚ್. ಶಿವಶಂಕರ ರೆಡ್ಡಿ : ಉತ್ತರ ಸ್ವಲ್ಪ ಮಟ್ಟಿಗೆ ಸಮಾಧಾನ ತಂದಿದೆ. ಆದರೂ, ಸಾಕಷ್ಟು ಅಕ್ರಮವಾಗಿ ಇನ್ನೂ ಕೂಡ ಮರಳು ಸಾಗಾಣಿಕೆಯಾಗುತ್ತಿದೆ. ಅಲ್ಲೇನು ಒಂದು ಮುಖ್ಯ ರಸ್ತೆಯಲ್ಲಿ ಮಾತ್ರ ಚೆಕ್‌ಪೋಸ್ಟ್ ಮಾಡಿದ್ದಾರೆ. ಇನ್ನೂ 2–3 ರಸ್ತೆಗಳಲ್ಲಿ ಚೆಕ್‌ಪೋಸ್ಟ್ ಇಲ್ಲದೇ ಇರುವುದರಿಂದ ರಾತ್ರಿ ಹೊತ್ತು ಈಗಲೂ ಕೂಡ ಮರಳು ಅಕ್ರಮವಾಗಿ ಗಣಿಗಾರಿಕೆಯಾಗಿ ಹೋಗುತ್ತಿದೆ. ನಾನು ಒಂದು ಸಲಹೆ ನೀಡಲಿಕ್ಕೆ ಇಚ್ಛೆಪಡುತ್ತೇನೆ, ಒಂದು ಫ್ಲೈಯಿಂಗ್ ಸ್ಕ್ವಾಡ್ ತರಹ ಮಾಡಿ ಗಣಿ ಇಲಾಖೆಯವರು ಮತ್ತು ರೆವಿನ್ಯೂ, ಪೊಲೀಸ್ ಇಲಾಖೆಯ ಅಧಿಕಾರಿಗಳು, ಎಲ್ಲಿ ಗಣಿಗಾರಿಕೆ ನಡೆಸುತ್ತಿದ್ದಾರೆ ಅಂಥ ಸ್ಥಳಗಳಿಗೆ ಭೇಟಿ ನೀಡಿ ಫೈನ್ ಹಾಕುವುದನ್ನು ಅಥವಾ ವೆಹಿಕಲ್ಸ್ ಸೀಜ್ ಮಾಡುವುದನ್ನು ಮಾಡಿದರೆ ಇನ್ನೂ ಹೆಚ್ಚಿಗೆ ನಿಯಂತ್ರಣ ತರಲಿಕ್ಕೆ ಸಾಧ್ಯವಾಗುತ್ತದೆ. ಅದನ್ನು ನಾನು ಮಾನ್ಯ ಮುಖ್ಯ ಮಂತ್ರಿಗಳಿಗೆ ಒತ್ತಾಯಿಸುತ್ತಿದ್ದೇನೆ. ಸಂಬಂಧಪಟ್ಟ ಈ ಒಂದು ವಿಚಾರದಲ್ಲಿ ಇನ್ನೂ ಹೆಚ್ಚಿನ ಒಂದು ನಿಯಂತ್ರಣ ತರಲಿಕ್ಕೆ ಸೂಚನೆ ಕೊಡಬೇಕೆಂದು ಹೇಳಿ ಮನವಿ ಮಾಡಿಕೊಳ್ಳುತ್ತೇನೆ.

ಶ್ರೀ ಜೆ. ನರಸಿಂಹಸ್ವಾಮಿ : ಗೌರಿ ಬಿದನೂರು ತಾಲ್ಲೂಕಿನ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳ ಗಮನ ಸೆಳೆಯುತ್ತಿದ್ದೇನೆ. ದೊಡ್ಡಬಳ್ಳಾಪುರದ ಮೇಲೆ ಗೌರಿಬಿದನೂರಿನಿಂದ ಸಾಕಷ್ಟು ಮರಳು ಲಾರಿಗಳಲ್ಲಿ ಬರುತ್ತಿದೆ. ಅದರ ಜೊತೆಗೆ, ನಮ್ಮ ತಾಲ್ಲೂಕಿನಲ್ಲಿ ಮರಳು ಯಾವ ರೀತಿ ಸಂಗ್ರಹಣೆ ಮಾಡುತ್ತಿದ್ದಾರೆಂದರೆ, ಪ್ರಕೃತಿದತ್ತವಾಗಿ ಬಂದಂಥ ಏನು ರೆವಿನ್ಯೂ ಲ್ಯಾಂಡ್ ಇದೆ, ಅದನ್ನು ರೈತರು ಮರಳನ್ನು ವಿಂಗಡಿಸಿ, ದೊಡ್ಡ ದೊಡ್ಡ ಗುಂಡಿಗಳಾಗುತ್ತಿದೆ. ಅದಕ್ಕೆ ಮಾನ್ಯ ಮುಖ್ಯಮಂತ್ರಿಗಳು ಏನು ಕ್ರಮ ತೆಗೆದುಕೊಳ್ಳುತ್ತಿದ್ದಾರೆ? ಏಕೆಂದರೆ, ಇದು ಮುಂದೆ ರಾಜಸ್ತಾನ ಆಗುವಂಥ ಪರಿಸ್ಥಿತಿ ನಮ್ಮ ತಾಲ್ಲೂಕಿನಲ್ಲಿ ಉಂಟಾಗುತ್ತಿದೆ.

ಅದಕ್ಕೆ ಸನ್ಮಾನ್ಯ ಮುಖ್ಯಮಂತ್ರಿಗಳು ತಾವು ಯಾವ ಕ್ರಮ ತೆಗೆದುಕೊಳ್ಳುತ್ತೀರಿ ಎಂಬುದನ್ನು ದಯವಿಟ್ಟು ಹೇಳಬೇಕು.

(ಗೊಂದಲ)

ಅಧ್ಯಕ್ಷರು: ಈಗ ಎಲ್ಲಾ ನಿಂತುಕೊಂಡರೆ ಮಾತನಾಡಲಿಕ್ಕೆ ಸಾಧ್ಯವಾಗುವುದಿಲ್ಲ ಇದೇನಿದು ಅವಕಾಶವಿದೆಯಾ? ಏನಿದು?

ಶ್ರೀ ಕೆ. ಶ್ರೀನಿವಾಸಗೌಡ: ದಯವಿಟ್ಟು ಕೇಳಿ. ನಮ್ಮ ಜಿಲ್ಲೆಯ ಅಳಿವು ಉಳಿವಿನ ಪ್ರಶ್ನೆ ಇದು. ದಯವಿಟ್ಟು, ನೀವು ಇಷ್ಟು ಸಿಟ್ಟಾದರೆ ಹೇಗೆ ಮಾನ್ಯ ಅಧ್ಯಕ್ಷರೆ ?

ಅಧ್ಯಕ್ಷರು: ಅಳಿವು–ಉಳಿವಿನ ಪ್ರಶ್ನೆ ಸರಿ. ಎಲ್ಲಾ ನಿಂತುಕೊಂಡು ಎಲ್ಲಾ ಒಬ್ಬೊಬ್ಬರು ಪ್ರಶ್ನೆ ಕೇಳಿದರೆ ಎಷ್ಟು?

ಶ್ರೀ ಕೆ. ಶ್ರೀನಿವಾಸಗೌಡ : ಇವತ್ತು ನಮ್ಮಲ್ಲಿ ಮರಳು ಗಣಿಗಾರಿಕೆ ಜಾಸ್ತಿಯಾಗಿದೆ. ಇದಕ್ಕೆ ಹಿಂದೆ ಮಾನ್ಯ ಧರ್ಮಸಿಂಗ್‌ರವರಿದ್ದಾಗ 3–4 ಸಾರಿ ಇದನ್ನು ಬ್ಯಾನ್ ಮಾಡಿಸಿದ್ದೆವು. ಈಗ ಒಂದು ಹೊಸ ಕಾನೂನನ್ನು ನೀವು ಇಷ್ಯೂ ಮಾಡಿದ್ದೀರಿ ಒಂದು ಮೀಟರ್‌ನೊಳಗೆ ಹೋಗಬಾರದೆಂದು ಇವತ್ತು 10 ಮೋಟರ್, 15 ಮೀಟರ್ ಹೋಗಿ ಆಳದಲ್ಲಿ ನದಿ ಏರಿಯಾಗಳಲ್ಲಿ ಮರಳು ಎತ್ತುತ್ತಿದ್ದಾರೆ. ನಮ್ಮದು ಇವತ್ತು 18 ಅಡಿಯಲ್ಲಿ ಇದ್ದ ನೀರು 1100 ಅಡಿಗೆ ಹೋಗಿದೆ. ನಾನೊಂದು ಬೋರ್‌ವೆಲ್ ತೆಗೆಸಿದಾಗ ಅದು 1030 ಅಡಿ ಹೋಗಿತ್ತು. ಈ ಪರಿಸ್ಥಿತಿಯಲ್ಲಿ ಅದನ್ನು ನೀವು ಕಡ್ಡಾಯವಾಗಿ ನಮ್ಮ ಜಿಲ್ಲೆಯಿಂದ ಮರಳನ್ನು ನಿಲ್ಲಿಸಬೇಕು. ಮೊದಲನೆಯದಾಗಿ ನಾನು ಮುಖ್ಯಮಂತ್ರಿಗಳಲ್ಲಿ ಕೇಳಿಕೊಳ್ಳುತ್ತೇನೆ. ಎರಡನೆಯದಾಗಿ, ನಿನ್ನೆ ನಮ್ಮ ಮಾನ್ಯ ಯಡಿಯೂರಪ್ಪನವರು ಮಾತನಾಡುತ್ತಾ ಈ ಐರನ್ ಓರ್ ಇವೆಲ್ಲಾ ಸಾಗಿಸುವಂಥ ರಸ್ತೆಗಳನ್ನು ಮೇಲ್ದರ್ಜೆಗೇರಿಸಿ ಸರಿ ಮಾಡುತ್ತೇವೆಂದು ಬಡ್ಜೆಟ್‌ನಲ್ಲಿ ಹೇಳಿದ್ದೀರಿ. ನಮ್ಮದು ಅದೇ ಪರಿಸ್ಥಿತಿ ಇದೆ. ಗೌರಿ ಬಿದನೂರಿನಿಂದ ಬೆಂಗಳೂರು, ಬಾಗೇಪಲ್ಲಿಯಿಂದ ಬೆಂಗಳೂರು, ಚಿಂತಾಮಣಿಯಿಂದ ಬೆಂಗಳೂರು, ಶ್ರೀನಿವಾಸಪುರದಿಂದ ಬೆಂಗಳೂರು, ಮುಳಬಾಗಿಲಿನಿಂದ ಕೋಲಾರ, ಮಾಲೂರಿನಿಂದ ಈ ತರಹ ಎಲ್ಲಾ ರಸ್ತೆಗಳೂ ಕೂಡ ಹದಗೆಡುತ್ತಿವೆ.

ಅಧ್ಯಕ್ಷರು : ನಿಮ್ಮಿಂದ ಓಡ್ ಹೋಗುತ್ತಾ?

ಶ್ರೀ ಕೆ. ಶ್ರೀನಿವಾಸಗೌಡ : ಅದಕ್ಕೆ ಮುಖ್ಯಮಂತ್ರಿಗಳು ಇದಕ್ಕೂ ಕೂಡ ಆದ್ಯತೆಗಳನ್ನು ಕೊಡಬೇಕು. ನಮ್ಮ ಜಿಲ್ಲೆಯಿಂದ ಮರಳು ಬ್ಯಾನ್ ಮಾಡಬೇಕು ಎಂದು ನಾನು ತಮ್ಮ ಮೂಲಕ ಮಾನ್ಯ ಮುಖ್ಯಮಂತ್ರಿಗಳ ಹತ್ತಿರ ಕೇಳುತ್ತಿದ್ದೇನೆ.

ಶ್ರೀ ಹೆಚ್. ಡಿ. ಕುಮಾರಸ್ವಾಮಿ : ಹಿಂದೆ ಏನು ಒಂದು ತೀರ್ಮಾನ ಮಾಡಿ ಒಂದು ಮೀಟರ್‌ನ ಮೇಲೆ ಮರಳನ್ನು ತೆಗೆಯಬಾರದೆಂದು ಒಂದು ತೀರ್ಮಾನ ಒಂದು ಟಾಸ್ಕ್ ಫೋರ್ಸ್ ಸಮಿತಿಯನ್ನು ರಚನೆ ಮಾಡಿ, ಕೆಲವು ನಿರ್ಬಂಧನೆಗಳನ್ನು ವಿಧಿಸಿದಂಥ ಸಂದರ್ಭದಲ್ಲಿ ಏನು ಕೆಲವರು ಮರಳನ್ನು ಇನ್ನೂ ಹೆಚ್ಚಾಗಿ ತೋಡತಕ್ಕಂಥ ಕೆಲಸ ಮಾಡುತ್ತಿದ್ದಾರೆಂದು ನಮ್ಮ ಗಮನಕ್ಕೆ ತಂದಿದ್ದಾರೆ, ಈ ವಿಷಯದಲ್ಲಿ ಸುಮಾರು 17 ಲಕ್ಷ ರೂಪಾಯಿಗಳ ದಂಡವನ್ನೂ ವಿಧಿಸಿ ಈಗಾಗಲೇ 294 ಲಾರಿಗಳ ಮೇಲೆ ದಂಡ ವಿಧಿಸಿರತಕ್ಕಂಥದ್ದು ಹಾಗೂ 21 ವಾಹನಗಳ ಮೇಲೆ ಎಫ್‌ಐಆರ್ ದಾಖಲೂ ಮಾಡಿದೆ. 680 ಮೆಟ್ರಿಕ್ ಟನ್ ಮರಳು ಖನಿಜವನ್ನು ಮುಟ್ಟುಗೋಲು ಹಾಕಿಕೊಳ್ಳಲಾಗಿದೆ. ಸದಸ್ಯರು ಇವತ್ತೇನು ಈ ವಿಷಯದಲ್ಲಿ ಕೋಲಾರ ಜಿಲ್ಲೆಯ ನೀರಿನ ಸಮಸ್ಯೆ ಇನ್ನೂ ಒಂದು ಬಹಳ ಕಷ್ಟಕರವಾದ ಪರಿಸ್ಥಿತಿ ಬರುತ್ತದೆ ಏನ್ನುವಂಥ ಒಂದು ಭಾವನೆಯನ್ನು ವ್ಯಕ್ತ ಪಡಿಸುತ್ತಿದ್ದಾರೆ. ನಾನು ಗಣಿ ಇಲಾಖೆಯ ಅಧಿಕಾರಿಗಳ ಜೊತೆ ಚರ್ಚೆ ಮಾಡಿ ಈ ವಿಷಯದಲ್ಲಿ ನಾವು ಕಠಿಣವಾದ ನಿರ್ಧಾರನ್ನೂ ಮಾಡಬೇಕಾಗುತ್ತದೆ. ಕೋಲಾರ ಜಿಲ್ಲೆಯಲ್ಲಿರತಕ್ಕಂಥ ಸಮಸ್ಯೆಯನ್ನು ಸರಿಪಡಿಸತಕ್ಕಂಥದ್ದಕ್ಕೆ ನಿರ್ದಾಕ್ಷಿಣ್ಯವಾದ ಕ್ರಮವನ್ನು ತೆಗೆದುಕೊಳ್ಳುತ್ತೇವೆ.

(ಗೊಂದಲ)

ಅಧ್ಯಕ್ಷರು : ಈಗ ಏನಾಗಿದೆ ಎಂದರೆ, ಈ ಮರಳು ಗಣಿಗಾರಿಕೆ ಏನ್ನುವುದು. . . .

ಶ್ರೀ ಪ್ರಕಾಶ್ ಬಿ. ಹುಕ್ಕೇರಿ : ಬೆಳಗಾಂ ಜಿಲ್ಲೆಯಲ್ಲೂ ಕೂಡ.....

ಅಧ್ಯಕ್ಷರು : ಕೊಡುತ್ತೇನೆ ಮರಳು ಗಣಿಗಾರಿಕೆ ಎಲ್ಲಾ ಜಿಲ್ಲೆಗಳಲ್ಲೂ ವ್ಯಾಪಿಸಿದೆ. ನಿಮ್ಮ ಕಾನೂನು, ಕಟ್ಟಳೆ ನೀವೇ ಇಟ್ಟುಕೊಳ್ಳಿ ಎಂದು ಬಿಟ್ಟು ಅವರಿಷ್ಟ ಬಂದ ರೀತಿಯಲ್ಲಿ ಮರಳನ್ನು ತೆಗೆದು, ಸಾಗಿಸತಕ್ಕಂಥದ್ದು ಎಲ್ಲಾ ಜಿಲ್ಲೆಗಳಲ್ಲಿ ನೋಡಿದ್ದೇವೆ. ಅದರಿಂದ ಅನೇಕ ಸೇತುವೆಗಳಿಗೆ ತೊಂದರೆಯಾಗುತ್ತಿದೆ. ಅನೇಕ ಸ್ಪ್ರಕ್ಚರ್‌ಗಳಿಗೆಲ್ಲಾ ತೊಂದರೆಯಾಗುತ್ತಿದೆ. ಇದರ ಬಗ್ಗೆ ಸಮಗ್ರವಾಗಿ ಒಂದು ಅಧ್ಯಯನ ಮಾಡಿ ಎಲ್ಲಿ ಮರಳು ತೆಗೆಯಬೇಕು, ಎಲ್ಲಿ ತೆಗೆಯಬಾರದು? ಎಷ್ಟು ತೆಗೆಯಬೇಕು? ಅವರೇನಾದರೂ ಕಾನೂನು ಉಲ್ಲಂಘನೆ ಮಾಡಿ ತೆಗೆದರೆ ಅದಕ್ಕೆ ಕಠಿಣವಾದ ಶಿಕ್ಷೆ ಇರಬೇಕು. ಆ ತರಹ ಏನಾದರೂ ಮಾಡಿದರೆ ಸರ್ಕಾರ, ಅನುಕೂಲವಾಗುತ್ತದೆಯೇ ಹೊರತು ಇಲ್ಲದಿದ್ದರೆ, ಏನೂ ಪ್ರಯೋಜನವಿಲ್ಲ ಎಂಬುದು ನನ್ನ ಭಾವನೆ.

ಶ್ರೀ ವಾಟಾಳ್ ನಾಗರಾಜ್ : ಇದಕ್ಕೆ ಅರ್ಧ ಗಂಟೆ ಚರ್ಚೆಗೆ ಅವಕಾಶ ಕೊಡಿ.

ಅಧ್ಯಕ್ಷರು : ನೋ ನೋ ಇದರ ಬಗ್ಗೆ ಡಿಮಾಂಡ್ಸ್ ಮೇಲೆ ಮಾತನಾಡುವಾಗ ಮಾತನಾಡಿ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಇದರ ಬಗ್ಗೆ ಈ ಹಿಂದೆಯೂ ಕೂಡ ಸಾಕಷ್ಟು ಹಿಂದಿನ ಮುಖ್ಯಮಂತ್ರಿಗಳ ಛೇಂಬರ್‌ನಲ್ಲಿ ಜಾಲಪ್ಪನವರು ಮತ್ತು ನಮ್ಮ ಶ್ರೀನಿವಾಸಗೌಡರು ಎಲ್ಲರೂ ಕೂಡ ಸ್ಪೆಷಲ್ ಆಗಿ ಇದೊಂದು ಇಷ್ಯೂನೇ ಮಾಡಿ, ಒಂದು ಮೀಟಿಂಗ್ ಕರೆದು, ಎಲ್ಲನೂ ಕೂಡ ಮಾಡಿದರು. ಮೈನ್ಸ್ ಅಂಡ್ ಜಿಯಾಲಜಿ ಡಿಪಾರ್ಟ್‌ಮೆಂಟ್‌ನವರಿಗೂ ಕರೆಸಿದ್ದರು. ಟ್ರಾನ್ಸ್‌ಪೋರ್ಟ್ ಡಿಪಾರ್ಟ್‌ಮೆಂಟ್‌ನವರಿಗೂ ಕರೆಸಿದ್ದರು. ಅದರ ಜೊತೆಗೆ ಡೆಪ್ಯೂಟಿ ಕಮೀಷನರ್‌ಗಳನ್ನು ಕೂಡ ಕರೆಸಿ ಮಾತನಾಡಿದರು. ಪಂಚಾಯಿತಿಯವರು ಏನು ಮಾಡುತ್ತಾರೆ, ನೀವು ತೆಗೆದುಕೊಂಡು ಹೋಗಿ ಎಂದು ಬರೆದು ಕೊಡುತ್ತಾರೆ. ಅದಕ್ಕೆ ಜಿಲ್ಲಾ ಪಂಚಾಯಿತಿ ಚೀಫ್ ಸೆಕ್ರೇಟರಿ, ಡೆಪ್ಯೂಟಿ ಕಮೀಷನರ್ .

ಅಧ್ಯಕ್ಷರು : ಮಲ್ಲಿಕಾರ್ಜುನ ಖರ್ಗೆಯವರೆ, ಎಲ್ಲಾ ಕಡೆ ದೇವಸ್ಥಾನ ಕಟ್ಟಿಸಿಕೊಳ್ಳುವುದಕ್ಕೆಂದು ಅವರ ಹತ್ತಿರ ದುಡ್ಡು ವಸೂಲಿ ಮಾಡಿಕೊಂಡು ಎಲ್ಲಾ ಕಡೆ ಅಲಾ ಮಾಡುತ್ತಿದ್ದಾರೆ. ಈಗ ಎಲ್ಲಾ ಗ್ರಾಮ ಸ್ವರಾಜ್ಯ. ಆ ತರಹದ ಮಟ್ಟಕ್ಕೆ ಬಂದಿದೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಕನ್‌ಸ್ಟ್ರಕ್ಷನ್‌ಗೆ ಮರಳಂತೂ ಬೇಕೆ ಬೇಕು ಅದನ್ನು ತೆಗೆದುಕೊಳ್ಳಲೇಬೇಕು. ಆದರೆ ಇತಿಮಿತಿಯಲ್ಲಿ ತೆಗೆದುಕೊಂಡು ಹೋಗತಕ್ಕಂಥದ್ದು ಮತ್ತು ಡಿಸ್ಪೆನ್ಸ್ ಮೇಲೆ, ಎಲ್ಲಿ ಸೇತುವೆಗಳು ಇವೆ, ಎಲ್ಲಿ ಅಣೆಕಟ್ಟುಗಳು ಇವೆ, ಅಲ್ಲಿ ಬಿಟ್ಟು ಬೀಡ ಬೇಕಾದರೆ ನೀವು ಒಂದು ನಿಗಧಿ ಮಾಡಿ, (ಎ) ಪ್ಲೇಸ್, (ಬಿ) ಪ್ಲೇಸ್, (ಸಿ) ಪ್ಲೇಸ್, ಇಂಥ ಕಡೆಯಿಂದ ತೆಗೆದುಕೊಂಡು ಹೋಗಿ ಎಂದು ಮಾಡಬೇಕು. ಅದಕ್ಕೆ ಡೆಪ್ಯೂಟಿ ಕಮೀಷನರ್‌ರವರನ್ನು ರೆಸ್ಪಾನ್ಸ್ ಬಿಲಿಟಿ ಫಿಕ್ಸ್ ಮಾಡಿದ್ದೆವು. ಅಲ್ಲಿ ಏನಾದರೂ ಹೋದರೆ ಈ ಸೇತುವೆಗಳ ಪಕ್ಕದಲ್ಲಿ, ಬ್ರಿಡ್ಜ್ ಪಕ್ಕದಲ್ಲಿ, ಅಣೆಕಟ್ಟು ಪಕ್ಕದಲ್ಲಿ ಹೋದರೆ, ಅಂಥ ಎಲ್ಲಾ ಕಡೆಗಳಲ್ಲೂ ಕೂಡ ಹೋದರೆ ಅವರೇ ರೆಸ್ಪಾನ್ಸಿಬಲ್ ಆಗುತ್ತಾರೆ ಎಂದು ಈಗಲೂ ಕೂಡ ಇನ್ನೊಂದು ಸಾರಿ ಇದನ್ನು ರಿಪೀಟ್ ಮಾಡಿದರೆ ಕನಿಷ್ಟ ಪಕ್ಷ ನಿಲ್ಲುತ್ತದೆ, ಅದು ಪೂರ್ತಿ ನಿಲ್ಲುತ್ತದೆ ಎಂದು ಹೇಳುವುದಿಲ್ಲ, ಆದರೆ ಸ್ವಲ್ಪ ಮಟ್ಟಿಗೆ ಇದು ತಡೆಹಿಡಿಯಲಿಕ್ಕೆ ಸಾಧ್ಯವಾಗುತ್ತದೆ, ಇಲ್ಲದಿದ್ದರೆ ಕೋಟಿಗಟ್ಟಲೆ ರೂ. ಖರ್ಚು ಮಾಡಿ ನಾವು ಕಟ್ಟಿದಂಥ ಬ್ರಿಡ್ಜ್ ಕೂಡ ಕೊಲ್ಯಾಪ್ಸ್ ಆಗುತ್ತವೆ. ಆ ಒಂದು ದೃಷ್ಟಿಯಿಂದ ಸಧ್ಯಕ್ಕೆ ಅವರಿಗೆ ಇನ್‌ಸ್ಟ್ರಕ್ಷನ್ ಕೊಡಬೇಕೆಂದು ವಿನಂತಿ.

ಶ್ರೀ ಪ್ರಕಾಶ್ ಬಿ.ಹುಕ್ಕೇರಿ : ನಮ್ಮಲ್ಲಿ ಗಡಿಭಾಗದಲ್ಲಿ ಕೃಷ್ಣಾನದಿಯಿಂದ ದೂದಗಂಗಾ ನದಿಯಿಂದ ಮರಳನ್ನು ತೆಗೆದು ಮಹಾರಾಷ್ಟ್ರಕ್ಕೆ ಹೋಗುತ್ತಿದೆ. ಸಾಂಗ್ಲಿ ಕೊಲ್ಲಾಪುರಕ್ಕೆ ಇಡೀ ರಾತ್ರಿ 100 ರಿಂದ 150 ಟ್ರಕ್ ಎಲ್ಲಾ ಹೋಗುತ್ತಿವೆ. ತಾವು ದಯವಿಟ್ಟು ಮಹಾರಾಷ್ಟ್ರಕ್ಕೆ ಹೋಗುವುದನ್ನು ನಿಲ್ಲಿಸಿರಿ. ಈ ಕರ್ನಾಟಕದಲ್ಲಿ ಆಗುವುದಕ್ಕೆ ನಮ್ಮದೇನೂ ತಕರಾರು ಇಲ್ಲ. ಮಹಾರಾಷ್ಟ್ರಕ್ಕೆ ರಾತ್ರಿ ಸುಮಾರು 200 ಟ್ರಕ್ ಹೈವೇ ಮೇಲೆ ರಾತ್ರಿಯಿಂದ ಬೆಳಿಗ್ಗೆಯವರಿಗೆ 200 ಟ್ರಕ್ ಹೋಗುತ್ತವೆ, ಬೇಕಾದರೆ ಸನ್ಮಾನ್ಯ ಮುಖ್ಯಮಂತ್ರಿಗಳು ಇದರ ಬಗ್ಗೆ ಒಂದು ಎನ್‌ಕ್ವೈರಿ ಮಾಡಲಿ, ನಾವು ಅಸಿಸ್ಟೆಂಟ್ ಕಮೀಷನರ್‌ರವರಿಗೆ ಕೂಡ ವಿನಂತಿ ಮಾಡಿಕೊಂಡಿದ್ದೇವೆ, ದಯವಿಟ್ಟು ಇದನ್ನು ನಿಲ್ಲಿಸಬೇಕು, ಅದರಲ್ಲಿ ಪೊಲೀಸ್ ನವರು ಕೂಡ ಶಾಮೀಲಾಗಿದ್ದಾರೆ. ಪೋಲಿಸರು ಶಾಮೀಲಾಗಿ ಹಗಲಿನಲ್ಲಿ ಟ್ರಕ್‌ಗಳನ್ನು ಬಿಡುವುದಿಲ್ಲ ರಾತ್ರಿವೇಳೆ ಟ್ರಕ್‌ಗಳನ್ನು ಬಿಡುತ್ತಾರೆ. ದಯವಿಟ್ಟು ಅದರ ಬಗ್ಗೆ ಕ್ರಮ ತೆಗೆದುಕೊಳ್ಳಬೇಕೆಂದು ತಮ್ಮ ಮೂಲಕ ಕೋರುತ್ತೇನೆ.

ಶ್ರೀ ಮಹಾದೇವಪ್ಪ ಎಸ್. ಯಾದವಾಡ : ನೀವು ಮಂತ್ರಿಯಾಗಿದ್ದಾಗ ಏನು ಮಾಡಿದಿರಿ ಪ್ರಕಾಶ್ ಹುಕ್ಕೇರಿಯವರೆ ಜಿಲ್ಲಾ ಉಸ್ತುವಾರಿ ಸಚಿವರು ನೀವೇ ಇದ್ದಿರಲ್ಲಾ ?

ಶ್ರೀ ವಾಟಾಳ್ ನಾಗರಾಜ್ : ತುಂಗಾಭದ್ರ ಹೋಯಿತು, ಇದರ ಬಗ್ಗೆ ಸಮಗ್ರವಾಗಿ ಚರ್ಚೆಯಾಗಬೇಕು.

ಅಧ್ಯಕ್ಷರು : ನಾಗರಾಜ್‌ರವರೆ, ಸಮಗ್ರವಾಗಿ ಅದರ ಬಗ್ಗೆ ಚಿಂತನೆ ಮಾಡಿ ಎಲ್ಲಾ ವಿರೋಧ ಪಕ್ಷದ ಮುಖಂಡರುಗಳನ್ನು ಕರೆದು ಒಂದು ಸಮಗ್ರವಾದ ನೀತಿ ನಿರೂಪಿಸುತ್ತಾರೆ ಬಿಡಿ.

ಶ್ರೀ ವಾಟಾಳ್ ನಾಗರಾಜ್ : ಇದು ಹಗಲು ದರೋಡೆ. ಇದನ್ನು ಎಲ್ಲಿ ಕೇಳಬೇಕು ?

ಅಧ್ಯಕ್ಷರು : ಆಯಿತು ಹೇಳುತ್ತಾರೆ ಬಿಡಿ. ಈಗ ನನ್ನ ವೈಯಕ್ತಿಕ ಅಭಿಪ್ರಾಯ ಎನೆಂದರೆ, ಅಲ್ಲಿ ಹೊಂದಾಣಿಕೆ ಇಲ್ಲ. ಮೈನ್ಸ್ ಡಿಪಾರ್ಟ್‌ಮೆಂಟ್‌ನವರು ಪೊಲೀಸ್‌ನವರ ಮೇಲೆ ಹೇಳುತ್ತಾರ, ಪೊಲೀಸ್ ನವರು ರೆವಿನ್ಯೂನವರ ಮೇಲೆ ಹೇಳುತ್ತಾರೆ. ಹೀಗಾಗಿ ಪೊಲೀಸ್‌ನವರ ಪರ್ಮಿಟ್ ಮೇಲೆ ಎಲ್ಲಾ ನಡೆಯುತ್ತಿದೆ. ಆದುದರಿಂದ, ಪೊಲೀಸ್‌ನವರಿಗೆ ಆ ಜಿಲ್ಲಾ ಪೊಲೀಸ್ ಅಧಿಕಾರಿಯ ಮೇಲೆ ಏನಾದರೂ ಹೆಚ್ಚು ಕಡಿಮೆ ಆದರೆ ಆತನನ್ನು ಸಸ್‌ಪೆನ್ಷನ್‌ನಲ್ಲಿಟ್ಟು ಅವನೆ ಮೇಲೆ ಕೇಸ್ ಹಾಕುವುದಾದರೆ ಸ್ವಲ್ಪ ಉತ್ತಮವಾಗುವುದು ಎಂಬುದು ನನ್ನ ಅಭಿಪ್ರಾಯ.

ಶ್ರೀ ಕೆ. ಎನ್. ರಾಜಣ್ಣ : ನಾನು ಸ್ವಲ್ಪ ತಡವಾಗಿ ಬಂದೆ ತಾವು ನನಗೆ ಪರ್ಮಿಷನ್ ಕೊಟ್ಟರೆ ಪ್ರಶ್ನೆ ಕೇಳುತ್ತೇನೆ.

ಅಧ್ಯಕ್ಷರು : ಆವಾಗಲೇ ಕೊಟ್ಟಿದ್ದನಲ್ಲಾ. ಇವರು ಉತ್ತರ ಕೊಟ್ಟಾದ ಮೇಲೆ ಕೊಡುತ್ತೇನೆ. ಇವರು ಇದಕ್ಕೆ ಉತ್ತರ ಹೇಳಲಿ ನಂತರ ನೀವು ಕೇಳಿ.

ಶ್ರೀ ಹೆಚ್.ಡಿ. ಕುಮಾರಸ್ವಾಮಿ : ಈ ಮರಳು ಸಾಗಾಣಿಕೆ ವಿಷಯದಲ್ಲಿ ಇದು ಕೇವಲ ಕೆಲವು ಸ್ಥಳಗಳಲ್ಲಿ ಆಗತಕ್ಕಂಥ ತೊಂದರೆಗಳಿಲ್ಲ. ನನ್ನ ಕ್ಷೇತ್ರದಲ್ಲೂ ಈ ವಿಷಯದಲ್ಲಿ ನಾನು ಹಲವಾರು ರೀತಿಯಲ್ಲಿ ಪ್ರಯತ್ನಗಳನ್ನು ಪಟ್ಟಿದ್ದರೂ ಈ ವಿಷಯದಲ್ಲಿ ಯಶಸ್ಸನ್ನು ಕಾಣಿಸಲಿಕ್ಕೆ ಸಾಧ್ಯವಾಗಿಲ್ಲ. ಪೊಲೀಸ್ ಇಲಾಖೆಯ ಅಧಿಕಾರಿಗಳ ಮೇಲೆ ನೀವೇನು ಕ್ರಮ ತೆಗೆದುಕೊಳ್ಳಬೇಕೆಂದು ಹೇಳಿದ್ದೀರಿ. ಪೊಲೀಸ್ ಇಲಾಖೆಯ ಅಧಿಕಾರಿಗಳಿಗೆ ಮರಳು ಲಾರಿಗಳನ್ನು ಹಿಡಿಯತಕ್ಕಂಥ ಅವಕಾಶ ಕಾನೂನಿನಲ್ಲಿ ಇಲ್ಲ. ನಾನು ಅದೇ ರೀತಿ ಪೊಲೀಸ್ ಅಧಿಕಾರಿಗಳ ಜೊತೆ ವಿಚಾರ ಮಾಡಿ ನನ್ನ ಕ್ಷೇತ್ರದಲ್ಲಿ ಈ ವಿಷಯದಲ್ಲಿ ಸ್ವಲ್ಪ ದಿವಸದಲ್ಲಿ ಇದನ್ನು ತಡೆಹಿಡಿದೆ ಅದರ ಜೊತೆಗೆ ನಮ್ಮ ರೈತರುಗಳು ಇತ್ತೀಚಿಗೆ ಅವರೇ ಮರಳನ್ನು ವ್ಯಾಪಾರಕ್ಕೆ ಇಳಿದಿರುವಂಥದ್ದು ನಾವು ಹಲವಾರು ಸ್ಥಳಗಳಲ್ಲಿ ನೋಡುತ್ತಿದ್ದೇವೆ. ಈ ವಿಷಯದಲ್ಲಿ ರಾಜಕಿಯವಾಗಿ ಒಂದು ಸೂಕ್ಷ್ಮವಾದ ವಿಚಾರಗಳಿವೆ. ಇವತ್ತು ತಾವು ಹೇಳಿದ ಹಾಗೆ, ಸದನದ ಎಲ್ಲಾ ವಿರೋದ ಪಕ್ಷಗಳ ನಾಯಕರುಗಳನ್ನು ಕರೆದು ಸಭೆಯನ್ನು ಮಾಡಿ ಈ ವಿಷಯದ ಬಗ್ಗೆ ಸಮಗ್ರವಾಗಿ ಚರ್ಚೆ ಮಾಡಿ ಈ ಒಂದು ಸಮಗ್ರವಾದ ಹೊಸ ನೀತಿಯನ್ನು ಗಣಿ ಇಲಾಖೆಯಿಂದ ತರತಕ್ಕಂಥದ್ದಕ್ಕೆ ಗಮನಹರಿಸುತ್ತೇನೆ.

ಅಧ್ಯಕ್ಷರು : ಈಗ ರಾಜಣ್ಣನವರು.

ತುಮಕೂರು ಜಿಲ್ಲೆಯಲ್ಲಿ ಅಕ್ರಮವಾಗಿ ಖನಿಜ ತೆಗೆಯುತ್ತಿರುವುದು ಮತ್ತು ಗಣಿಗಾರಿಕೆ ನಡೆಸುತ್ತಿರುವ ಬಗ್ಗೆ.

(3) 90. ಶ್ರೀ ಕ್ಯಾತಸಂದ್ರ ಎನ್. ರಾಜಣ್ಣ (ಬೆಳ್ಳಾವಿ) ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ.

ಅ) ತುಮಕೂರು ಜಿಲ್ಲೆಯಲ್ಲಿ ಅಕ್ರಮವಾಗಿ ಖನಿಜ ತೆಗೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ಈ ಬಗ್ಗೆ ಸರ್ಕಾರವು ತೆಗೆದುಕೊಂಡಿರುವ ಕ್ರಮಗಳೇನು;

ಇ) ಅಕ್ರಮವಾಗಿ ಗಣಿಗಾರಿಕೆ ನಡೆಸಲು ಸರ್ಕಾರ ಪರವಾನಗಿ ನೀಡಿದೆಯೇ;

ಈ) ಹಾಗಿದ್ದಲ್ಲಿ, ಇದಕ್ಕೆ ಅನುಸರಿಸುವ ಮಾನದಂಡಗಳೇನು;